

# ಖಣದ ಸೀರೆಯ ಚಂದವ ಕಂಡಿರಾ?

**ಬನಾರಸ್, ಕಾಂಜೀವರಂ, ಮೈಸೂರು ರೇಷ್ಮೆ ಸೀರೆಗಳಂತೆ ಗುಳೇದಗುಡ್ಡದ ಖಣದ ನೇಯ್ಗೆ ಸೀರೆಗಳೂ ಪ್ರಸಿದ್ಧ. ಇಳಕಲ್ ಸೀರೆ ಹಾಗೂ ಗುಳೇದಗುಡ್ಡದ ಖಣಗಳದ್ದು ಒಂದು ಅಮೋಘ ಜುಗಲ್‌ಬಂದಿ! ಈ ಯಾಂತ್ರಿಕ ಯುಗದಲ್ಲೂ ಫ್ಯಾಷನ್ ಜಗತ್ತಿನೊಡನೆ ಪೈಪೋಟಿಯನ್ನು ಎದುರಿಸುತ್ತ, ಸಾಂಪ್ರದಾಯಿಕ ಚೆಲುವಿನಿಂದ ಕಂಗೊಳಿಸುವ ಈ ಸೊಬಗಿನ ಖಣಗಳು ಸಾಂಪ್ರದಾಯಿಕ ಚೆಲುವಿನೊಡನೆ ಆಧುನಿಕತೆಯ ಮೆರುಗನ್ನೂ ಮೇಳೈಸಿಕೊಂಡಿವೆ.**

**■ ಮುಕುಂದ್ ಕಿರಸೂರ್**

ಭಾರತೀಯ ವಸ್ತ್ರ ಪರಂಪರೆಗೆ ತನ್ನದೆ ಆದ ಭವ್ಯ ಇತಿಹಾಸವಿದೆ. ದೇಶದಾದ್ಯಂತ ಹರಡಿಕೊಂಡಿರುವ ಸುಪ್ರಸಿದ್ದ ನೇಯ್ಗೆ ಕೇಂದ್ರಗಳು ಈ ಭವ್ಯ ಪರಂಪರೆಯನ್ನು ತಮ್ಮ ಉತ್ಕೃಷ್ಟ, ಕಲಾತ್ಮಕ ಉತ್ಪಾದನೆಗಳ ಮೂಲಕ ಪ್ರತಿಬಿಂಬಿಸುತ್ತವೆ. ಬನಾರಸ್‌ನ ಬ್ರೋಕೇಡ್‌ಗಳು, ತಮಿಳುನಾಡಿನ ಕಾಂಜೀವರಮ್, ಆಂಧ್ರದ ಧರ್ಮಾವರಂ / ಪೋಚಂಪಲ್ಲಿ ಸೀರೆಗಳು, ಒರಿಸ್ಸಾದ ಇಕತ್, ಗುಜರಾತ್‌ನ ಪಟೋಲಾಗಳು, ಕರ್ನಾಟಕದ ಮೈಸೂರು, ಇಳಕಲ್, ಮೊಳಕಾಲ್ಮೂರು ಸೀರೆಗಳು ಇಂತಹ ಕೆಲ ಉದಾಹರಣೆಗಳಷ್ಟೆ. ಪ್ರತಿಯೊಂದು ಉತ್ಪನ್ನವೂ ತನ್ನದೇ ಆದ ವಿಶಿಷ್ಟ ವಿನ್ಯಾಸಗಳು, ವರ್ಣಗಳು, ವರ್ಣ ಸಂಯೋಜನೆ ಹಾಗೂ ನೇಯ್ಗೆ ಪ್ರಕಾರಗಳಿಗೆ ಪ್ರಸಿದ್ಧಿಯಾಗಿದ್ದು, ಗುಳೇದಗುಡ್ಡದ ಖಣಗಳೂ ಸಹ ಈ ಪಟ್ಟಿಗೆ ಸೇರುತ್ತವೆ. ಮಿನುಗು ಮಿನುಗೆಲೇ ಚುಕ್ಕಿ! ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಈ ಪುಟ್ಟ ಪಟ್ಟಣದಲ್ಲಿ ಸಾಮಾನ್ಯವಾಗಿ ರೇಷ್ಮೆಯ ಹಾಸು ಹಾಗೂ ಹತ್ತಿಯ ಹೊಕ್ಕನ್ನು ಬಳಸಿ ಖಣದ ಬಟ್ಟೆಯನ್ನು ನೇಯಲಾಗುತ್ತದೆ. ಖಣ 31' ಅಗಲ ಹಾಗೂ 19.68' ಉದ್ದವಿದ್ದು, ಒಬ್ಬ ನೇಕಾರ 8 ಗಂಟೆಗಳಲ್ಲಿ 34 ಮೀಟರ್ ಬಟ್ಟೆಯನ್ನು ನೇಯಬಲ್ಲ. ರೇಷ್ಮೆ, ರೇಷ್ಮೆ ಹಾಗು ಹತ್ತಿ, ಮತ್ತು ಪಾಲಿಯಸ್ಟರ್ ಖಣಗಳನ್ನು ಇಲ್ಲಿ ನೇಯಲಾಗುತ್ತಿದ್ದು ರೇಷ್ಮೆ ಖಣಗಳ ನೇಕಾರರಿಗೆ ಬರುವ ಲಾಭ ಹೆಚ್ಚು. ಅಂತೆಯೇ ಕೈಮಗ್ಗಗಳಲ್ಲಿ ನೇಯ್ದ ರೇಷ್ಮೆ ಹಾಗು ರೇಷ್ಮೆ ಮಿಶ್ರಿತ ಖಣಗಳಿಗೆ ಹೆಚ್ಚಿನ ಬೇಡಿಕೆ ಕೂಡ. ಕಣ್ಣಿಗೆ ತಂಪೆನಿಸುವ ಮಿನುಗುವ ಛಾಯೆ ಹೊಂದಿರುವ ಈ ಖಣಗಳು ಹಸಿರು, ನೀಲಿ, ಕೆಂಪು, ಗುಲಾಬಿ, ನೇರಳೆ, ಕಂದು ಇತ್ಯಾದಿ ದ್ವಿವರ್ಣಗಳಲ್ಲಿ ಲಭ್ಯ. ಈ ಖಣಗಳಲ್ಲಿ ಬಳಸುವ ಜನಪ್ರಿಯ ವಿನ್ಯಾಸಗಳೆಂದರೆ, ಚಂಡು ಹೂವು, ತೇರು, ರುದ್ರಾಕ್ಷಿ, ಆನೆ ಹೆಜ್ಜೆ, ಸೂಜಿ ಮಲ್ಲಿಗೆ, ಸೂರ್ಯಕಮಲ, ಸೂರ್ಯ ಮುಕುಟ, ನಯಾಪೈಸೆ ಬಿಲ್ಲೆ, ಸೇವಂತಿಗೆ, ಆನೆ ನವಿಲು, ಸಿದ್ಧೇಶ್ವರ ಹಾಗೂ ಕೇದಗಿ ಇತ್ಯಾದಿ. ಇಳಕಲ್ ಸೀರೆ ಹಾಗೂ ಗುಳೇದಗುಡ್ಡದ ಖಣಗಳದ್ದು ಒಂದು ಅಮೋಘ ಜುಗಲ್‌ಬಂದಿ! ಈ ಯಾಂತ್ರಿಕ ಯುಗದಲ್ಲೂ ನವನಾಗರಿಕ ಫ್ಯಾಷನ್ ಜಗತ್ತಿನೊಡನೆ ತೀವ್ರ ಪೈಪೋಟಿಯನ್ನು ಎದುರಿಸುತ್ತ, ಸಾಂಪ್ರದಾಯಿಕ ಚೆಲುವಿನಿಂದ ತನ್ನದೇ ಆದ ಬಹು ದೊಡ್ಡ ಗ್ರಾಹಕರ ಬಳಗವನ್ನು ಹೊಂದಿರುವ ಈ ಸೊಬಗಿನ ಖಣಗಳು ಸಾಂಪ್ರದಾಯಿಕ ಚೆಲುವಿನೊಡನೆ ಆಧುನಿಕತೆಯ ಮೆರುಗನ್ನೂ ಮೇಳೈಸಿಕೊಂಡಿವೆ. ಆದರೆ, ಮಾರುಕಟ್ಟೆ ಪೈಪೋಟಿಯಿಂದ ಈ ಖಣಗಳಿಗೆ ಬೇಡಿಕೆ ಕಡಿಮೆಯಾಗತೊಡಗಿತ್ತು. ಕ್ಷಿಪ್ರಗತಿಯಿಂದ ಖಣ ಅವನತಿಯ ಅಂಚಿಗೆ ಸರಿಯತೊಡಗಿತ್ತು.

ಇಂತಹ ಒಂದು ವಿಶಿಷ್ಟ ಹಾಗೂ ಶ್ರೇಷ್ಠ ಕಲಾಪ್ರಕಾರದ ಉಳಿವಿಗಾಗಿ ಕೇಂದ್ರ ರೇಷ್ಮೆ ಮಂಡಳಿ ಈ ಉದ್ಯಮದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು